# ಜನಗಣಮನದ ಕವಿ

ಒಂದು ಭೂಖಂಡ ತನ್ನನ್ನು ತಾನು ರಾಷ್ಟ್ರವೊಂದರ ಚೌಕಟ್ಟಿನಲ್ಲಿ ಗುರುತಿಸಿಕೊಂಡಾಗ; ಅದು ಅಲ್ಲಿನ ಜನತೆ, ಪರಿಸರ, ಪ್ರಾಣಿ, ಪಕ್ಷಿ ಎಲ್ಲವನ್ನೂ ತನ್ನ ತೆಕ್ಕೆಯೊಳಗೆ ತಂದುಕೊಳ್ಳುತ್ತದೆ. ಅಂಥ ರಾಷ್ಟ್ರಕ್ಕೆ ತನ್ನ ಅಸ್ಮಿತೆಯ ಪ್ರತೀಕವಾಗಿ ರಾಷ್ಟ್ರಧ್ವಜ, ರಾಷ್ಟ್ರಗೀತೆ ಮುಂತಾದವುಗಳನ್ನು ಗೊತ್ತುಪಡಿಸಿಕೊಂಡು ತನ್ನ ಪ್ರತ್ಯೇಕತೆಯನ್ನು ಸಾಬೀತುಗೊಳಿಸಿಕೊಳ್ಳಬೇಕಾದುದೂ, ತನ್ಮೂಲಕ ತನ್ನ ಅಖಂಡತೆಯನ್ನು ಕಾಪಾಡಿಕೊಳ್ಳಬೇಕಾದುದೂ ಅನಿವಾರ್ಯವಾಗುತ್ತದೆ. ಈ ಮಾತು ನಮ್ಮ ದೇಶಕ್ಕೂ ಅನ್ವಯಿಸುವಂಥದು. 1950ರ ಜವರಿ 26 ರಂದು ನಮ್ಮ ರಾಷ್ಟ್ರ ಸಂವಿಧಾನ ಬದ್ಧ ಸರ್ಕಾರವನ್ನು ಸ್ವೀಕರಿಸಿ–ತಾನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವೆಂಬುದಾಗಿ ಘೋಷಿಸಿಕೊಂಡಿತು. ಆ ಸಂದರ್ಭದಲ್ಲಿಯೇ ವಿಶ್ವಕವಿ ರವೀಂದ್ರನಾಥ ಠಾಗೋರರ 'ಜನಗಣಮನ ಅಧಿನಾಯಕ, ಜಯಹೇ' ಎಂದು ಪ್ರಾರಂಭವಾಗುವ ಗೀತೆಯನ್ನು ರಾಷ್ಟ್ರಗೀತೆಯನ್ನಾಗಿ ಆಯ್ಕೆ ಮಾಡಲಾಯಿತು.



ರಾಷ್ಟ್ರಗೀತೆಯೆಂಬುದು ಇಡೀ ರಾಷ್ಟ್ರದ ಜನಮಾನಸದ ಭಾವಲಹರಿಗಳನ್ನು ಪ್ರತಿನಿಧಿಸುವ, ರಾಷ್ಟ್ರದ ಏಕತೆ, ಸಮಗ್ರತೆಗಳನ್ನು ಬಿಂಬಿಸುವ ಗುಣಗಳನ್ನು ಒಳಗೊಂಡಿರಬೇಕು. ಅದನ್ನು ಹಾಡುವಾಗ ಜನರ ಮನಸ್ಸು ರಾಷ್ಟ್ರೀಯ ಪ್ರಜ್ಞೆಯಿಂದ ಉತ್ತೇಜಿತವಾಗುವಂತಿರಬೇಕು. ನಮ್ಮ ನೇತಾರರಿಗೆ ರವೀಂದ್ರರ ಈ ಗೀತೆಯಲ್ಲಿ ಸಹಜವಾಗಿಯೇ ಅಂಥ ಗುಣಗಳು ಕಂಡು ಬಂದುದರಿಂದ ಅದಕ್ಕೆ ರಾಷ್ಟ್ರಗೀತೆಯಾಗುವ ಗೌರವ ಪ್ರಾಪ್ತಿಯಾಯಿತು. ಈ ಗೀತೆಯಲ್ಲಿ ಸಮಗ್ರ ಭರತಖಂಡದ ಭೌಗೋಳಿಕ ವಿವರಗಳಿವೆ; ಸಾಂಸ್ಕೃತಿಕ ಹಾಗೂ ಧಾರ್ಮಿಕ ವೈವಿಧ್ಯಗಳ ಪ್ರಸ್ತಾಪವಿದೆ; ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಮನೋಧರ್ಮವನ್ನು ಉದ್ದೀಪಿಸುವ ಗುಣವಿದೆ, ಭೌಗೋಳಿಕವಾಗಿ, ಧಾರ್ಮಿಕವಾಗಿ ವೈವಿಧ್ಯ ಪೂರ್ಣವಾಗಿರುವ, ಆದರೆ ಏಕತೆಯಲ್ಲಿ ವಿಶ್ವಾಸವಿರಿಸಿರುವ ಭರತ ವರ್ಷವೆಂಬ ರಾಷ್ಟ್ರದ ಅಧಿನಾಯಕನಿಗೆ ನಿರಂತರ ಜಯವಾಗಲಿ ಎಂಬ ಅಭೀಪ್ಸೆಯೇ ಈ ಗೀತೆಯ ಪ್ರಧಾನ ಧ್ವನಿ. ತನ್ನಲ್ಲಿನ ಭಾವ ಪ್ರಕರ್ಷದಿಂದ, ಗೇಯ ಗುಣದಿಂದ ರಾಷ್ಟ್ರಗೀತೆಯ ಗೌರವಕ್ಕೆ ಪಾತ್ರವಾಗಿರುವ ಹಾಗೂ ರಾಷ್ಟ್ರದ 'ಅಧಿನಾಯಕ'ನನ್ನು ಉದ್ದೇಶಿಸಿರುವ ಈ ಹಾಡು ಆಧುನಿಕ ಭಾರತದ 'ಪುರುಷ ಸೂಕ್ತ' ಎನ್ನಬಹುದೇನೋ.

ಭಾರತದ ಇತಿಹಾಸದ ಸಂಕ್ರಮಣ ಕಾಲದಲ್ಲಿ– ಅದರಲ್ಲೂ, ಬಂಗಾಳದಲ್ಲಿ ವೈಚಾರಿಕ ಪ್ರವಾಹವೊಂದು ಪ್ರವಹಿಸುತ್ತಿದ್ದ ಕಾಲಘಟ್ಟದಲ್ಲಿ ಜೀವಿಸಿದ್ದ ರವೀಂದ್ರರು ತಮ್ಮ ಎಂಬತ್ತು ವರ್ಷಗಳ ಬದುಕಿನುದ್ದಕ್ಕೂ ಪರಿಪೂರ್ಣತೆಯನ್ನೇ ಅನುಸಂಧಾನ ಮಾಡಿದವರು. ತಮ್ಮ ಓರಿಗೆಯವರು ಆಟಗಳಲ್ಲಿ ಕಾಲಕಳೆಯುತ್ತಿದ್ದಾಗ ಬಾಲಕ ರವೀಂದ್ರರು ಒಂಟಿಯಾಗಿ, ಕನಸು ಕಾಣುತ್ತಾ ಅಂತರ್ಮುಖಿಯಾಗಿರುತ್ತಿದ್ದರಂತೆ. ಎಳನೆಯ ವಯಸ್ಸಿನಲ್ಲೇ ಪದ್ಯ ರಚಿಸಿದ ಅವರು ಹದಿನೇಳನೆಯ ವಯಸ್ಸಿನಲ್ಲಿ ತಮ್ಮ ಮೊದಲ ಕವನ ಸಂಕಲನವನ್ನು ಪ್ರಕಟಿಸಿದರು. ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋದರೂ, ಅದು ತಮ್ಮ ಮನೋಧರ್ಮಕ್ಕೆ ಒಗ್ಗದಿದ್ದುದರಿಂದ ಹದಿನೇಳು ತಿಂಗಳಲ್ಲೇ ಸ್ವದೇಶಕ್ಕೆ ಹಿಂತಿರುಗಿ, ಸಾಹಿತ್ಯ ರಚನೆಯಲ್ಲಿ ಹಾಗೂ ಇತರ ವಿಧಾಯಕ ಚಟುವಟಿಕೆಗಳಲ್ಲಿ ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡರು.

ರವೀಂದ್ರರದು ದೈತ್ಯ ಪ್ರತಿಭೆ. ಸತ್ವ, ಸಮೃದ್ಧಿ ಎರಡೂ ನೆಲೆಗಳಲ್ಲಿ ಅವರನ್ನು ಮೀರಿಸುವ ಬರೆಹಗಾರರು ವಿರಳ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅವರು ಶ್ರೇಷ್ಠತೆಯನ್ನು ತೋರಿಸಿದ್ದಾರೆ. ರಾಜಕೀಯ, ಧಾರ್ಮಿಕ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ, ಶ್ರೇಷ್ಠ ಮಾನವರಾಗಿ, ತಮ್ಮ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಚಿಂತನೆಗಳನ್ನು ಕ್ರಿಯಾತ್ಮಕವಾಗಿ ಸಾಕ್ಷಾತ್ಕರಿಸಿಕೊಂಡ ರವೀಂದ್ರರು 'ವಿಶ್ವಕವಿ', 'ಗುರುದೇವ' ಎಂಬೆಲ್ಲ ಗೌರವಗಳಿಗೆ ಪಾತ್ರರಾದರು. ಭಾರತಕ್ಕೆ ಸಾಹಿತ್ಯ ಕ್ಷೇತ್ರದ ಮೊದಲ ನೋಬಲ್ ಪುರಸ್ಕಾರವನ್ನು ದೊರಕಿಸಿಕೊಟ್ಟ ಅವರ 'ಗೀತಾಂಜಲಿ'ಯ ಅನುಭಾವ ಗೀತಗಳು ಅವರು ಐವತ್ತರ ಆಸುಪಾಸಿನ ರಚನೆಗಳು, ಸ್ವಾತಂತ್ರ್ಯ ಹೋರಾಟದಲ್ಲೂ ಸಕ್ರಿಯರಾಗಿದ್ದ ರವೀಂದ್ರರು ದೇಶದ ನೇತಾರರು ಹಾಗೂ ಜನತೆ ತಪ್ಪುದಾರಿಗಿಳಿದಾಗ ಎಚ್ಚರಿಸಿ, ಸರಿದಾರಿಗೆ ತರುತ್ತಿದ್ದರು. ಇದನ್ನು ಗಮನಿಸಿದ ಗಾಂಧೀಜಿ, ಅವರನ್ನು The great sentinnel (ಮಹಾ ಪ್ರಹರಿ) ಎಂದು ಕರೆದರು. ಉಪನಿಷತ್ತುಗಳ ಪ್ರಾಚೀನ ಯುಗದ ಅದ್ವೈತ ತತ್ವ, ಮಧ್ಯಯುಗದ ಸಂತರ ಭಕ್ತಿ, ಪ್ರೇಮ, ಪ್ರಪತ್ತಿ ಭಾವ, ಆಧುನಿಕ ಯುಗದ ವೈಚಾರಿಕ ಚಿಂತನೆ–ಇವುಗಳ ಸಂಗಮವೇ ಅವರ ಜೀವನದರ್ಶನವಾಗಿತ್ತು. 'ಈ ಜಗತ್ತು ನನ್ನೊಂದಿಗೆ ಬಣ್ಣಗಳಲ್ಲಿ ಮಾತಾಡುತ್ತದೆ; ನನ್ನ ಆತ್ಮ ಅದಕ್ಕೆ ಸಂಗೀತದಲ್ಲಿ ಪ್ರತಿಕ್ರಿಯಿಸುತ್ತದೆ' ಎಂದಿದ್ದರು ರವೀಂದ್ರರು.

ಭಾರತ ಸ್ವತಂತ್ರವಾಗುವ ಕನಸು ಕಂಡಿದ್ದ ರವೀಂದ್ರರು, ಸ್ವಾತಂತ್ರ್ಯ ಬರುವ ಮೊದಲೇ–1941 ರಲ್ಲಿ– ಈ ಜಗತ್ತಿಗೆ ವಿದಾಯ ಹೇಳಿದರು. ಆದಾಗ್ಯೂ ಅವರೀಗ ಸ್ವತಂತ್ರ ಭಾರತದ ಜನಗಣಮನದಲ್ಲಿ ಜೀವಂತವಾಗಿದ್ದಾರೆ!

■ ವೈನತೇಯ

## ಮಾತೇ ಮುತ್ತು

★ ಮರ್ಯಾದೆಯಿಂದ ಕೇಳಿದರೆ ಕೋಟೆಯೂ ನಿಮಗೆ ದಾರಿ ಬಿಟ್ಟುಕೊಡುತ್ತದೆ.
–ಜೆಕ್ ಗಾದೆ

★ ಕೇವಲ ಸ್ಪರ್ಶದಿಂದಲೂ ಆನೆ ಕೊಲ್ಲುತ್ತದೆ. ಸರ್ಪವು ಮೂಸಿ ನೋಡುವುದರಿಂದಲೂ, ರಾಜನು ಮಂದಹಾಸ ಬೀರುತ್ತಲೂ ಕೊಲ್ಲುವರು. ಹಾಗೆಯೇ ದುರ್ಜನನಾದವನಿಗೆ ಗೌರವ ತೋರಿದರೂ ಅವನು ಕೊಲ್ಲುವನು.
–ಹಿತೋಪದೇಶ

★ ಹುಟ್ಟು ಸಾವಿಗೆ ಇರುವ ಪರಿಹಾರ ಒಂದೇ; ಎರಡರ ನಡುವೆ ಸಂತೋಷದಿಂದಿರುವುದು.
–ಜಾರ್ಜ್ ಸಂತಯನ

★ ತನಗಾಗಿ ತಾನು ಬಾಳದಿರುವುದೇ ನಿಜವಾದ ಬಾಳು.
–ಮಿನಾಂಡರ್

★ ಜೀವನ ಒಂದು ವಿದೇಶೀ ಭಾಷೆ; ಎಲ್ಲರೂ ಅದನ್ನು ತಪ್ಪುತಪ್ಪಾಗಿ ಉಚ್ಚರಿಸುತ್ತಾರೆ.
–ಕ್ರಿಸ್ತಫರ್ ಮಾರ್ಲೆ

★ ಸತ್ಪುರುಷರು ಪರೋಪಕಾರವನ್ನೂ, ಶೂರರು ಶಸ್ತ್ರವನ್ನೂ, ಜಿಪುಣರು ಧನವನ್ನೂ, ಕುಲಸ್ತ್ರೀಯರು ನಾಚಿಕೆಯನ್ನು– ಪ್ರಾಣ ಹೋದಾಗ ಮಾತ್ರ ತ್ಯಜಿಸುತ್ತಾರೆ.
–ರಸ ಗಂಗಾಧರ

★ ಅವಮಾನದಿಂದ ಉಪೇಕ್ಷಿತವಾದ ಪ್ರೇಮವು ಮತ್ತೆ ಬೆಸುಗೆಯಾಗುವುದು ಕಷ್ಟ. ಒಡೆದ ಮಣಿಯನ್ನು ಅರಗಿನಿಂದ ಕೂಡಿಸಲಾಗುವುದಿಲ್ಲ.
–ರಾಮಾಯಣ

★ ಸಮಾಜ ಸುಧಾರಣೆಯ ಹಾದಿ ಮೋಕ್ಷದ ಹಾದಿಯಂತೆಯೇ ಅಡೆತಡೆಗಳಿಂದ ತುಂಬಿದೆ. ಸಮಾಜ ಸುಧಾರಣೆಗೆ ಭಾರತದಲ್ಲಿ ಕೆಲವೇ ಮಿತ್ರರು, ಅನೇಕ ಟೀಕಾಕಾರರು ಇದ್ದಾರೆ.
–ಬಿ.ಆರ್.ಅಂಬೇಡ್ಕರ್

★ ನಮ್ಮ ಚಿಂತನೆಯಾಗಲೀ ನಡೆಯಾಗಲೀ ಆಗಿನ ಸನ್ನಿವೇಶವನ್ನು ಅವಲಂಬಿಸಿರುತ್ತದೆ.
–ಲಿಯೋ ಟಾಲ್‌ಸ್ಟಾಯ್

★ ನಿಜವಾದ ಕಲೆ ಸತ್ಯದಿಂದ ದೂರ ಇರಲಾರದು.
–ಆರ್.ಎಂ.ಹಡಪದ

★ ಅಳತೆ ಮೀರಿದ ಹಣ ನಿಮ್ಮ ಬಳಿ ಇದ್ದರೆ ಅದು ನಿಮ್ಮನ್ನೇ ತಿಂದುಬಿಡುತ್ತದೆ.
–ವಿದುರ

★ ಮಕ್ಕಳಿಲ್ಲದಿದ್ದರೆ ಜಗತ್ತು ದುಃಖಮಯವಾಗಿಬಿಡುತ್ತದೆ; ವೃದ್ಧರಿಲ್ಲದಿದ್ದರೆ ಮಾನವೀಯತೆಯಿಂದ ವಂಚಿತವಾಗಿಬಿಡಬಹುದು.
–ಕೋಲ್‌ರಿಜ್

★ ಸ್ವತ್ತುಗಳ ಸಂಗ್ರಹವೇ ಸಂಪತ್ತು ಎನ್ನಬೇಡ, ಸಂಪತ್ತು ತೃಪ್ತ ಮನೋಭಾವದ ಫಲ ಮಾತ್ರ.
–ಮಹಮದ್ ಪೈಗಂಬರ್

★ ಸಜ್ಜನರಿಗೆ ಬರುವ ಆಪತ್ತು, ದುಷ್ಟರಿಗೆ ಬರುವ ಸಂಪತ್ತು ಬಹಳ ದಿನ ಉಳಿಯುವುದಿಲ್ಲ.
–ಜನಪದ ಗಾದೆ

★ ಹಣ್ಣೆಲೆಗೆ ಗೊತ್ತು ಹಸಿರೆಲೆಯ ಹಣೆಬರಹ.
–ಲೋಕೋಕ್ತಿ